ಇಂದು ದಿಃ**28-07-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್.ಡಿ.ಬಿ ವಕೀಲರಿಂದ 2 ರಿಂದ 5 ನೇ ಪ್ರತಿವಾದಿಗಳ ಪರಃ**

ನಾನು 10 ನೇ ತರಗತಿಯವರೆಗೆ ಶಾಲೆ ಕಲಿತ್ತಿದ್ದೇನೆ. ನನ್ನ ತಂದೆಯ ಹೆಸರು ಸಣ್ಣಯಲ್ಲಪ್ಪ. ನನ್ನ ತಂದೆ 2007 ರಲ್ಲಿ ತೀರಿಕೊಂಡರು. ಸಣ್ಣಯಲ್ಲಪ್ಪ ಈತನಿಗೆ ನಾನು, ನಾಗವೇಣಿ, ಮಂಜುಳಾ ಮತ್ತು ಸರಿತಾ ಎಂಬ ಮಕ್ಕಳು ಇರುತ್ತೇವೆ. 5 ನೇ ಪ್ರತಿವಾದಿ ನನ್ನ ತಂದೆಯ ಎರಡನೇ ಹೆಂಡತಿ. 5 ನೇ ಪ್ರತಿವಾದಿ ನನ್ನ ತಂದೆಯ ಮೊದಲನೇಯ ಹೆಂಡತಿ ಇದ್ದರೂ, ಎರಡನೇ ಹೆಂಡತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ರಿಂದ 4 ನೇ ಪ್ರತಿವಾದಿಯರು 5 ನೇ ಪ್ರತಿವಾದಿಯ ಮಕ್ಕಳು. ನಾನು 8 ನೇ ವರ್ಷದವನು ಇದ್ದಾಗ ನನ್ನ ತಂದೆ ಎರಡನೇ ಮದುವೆ ಆಗಿರುತ್ತಾರೆ. ನನ್ನ ತಾಯಿಗೆ ವಿಚ್ಛೇದನ ಕೊಡದೇ ನನ್ನ ತಂದೆ ಯಾವುದೋ ಗುಡ್ಡದಲ್ಲಿ ಹೋಗಿ ತಾಳಿ ಕಟ್ಟಿ ಮದುವೆ ಆಗಿರುತ್ತಾರೆ. ಈ ಕುರಿತು ನನ್ನ ತಾಯಿ ಯಾವುದೇ ಕ್ರಿಮೀನಲ್ ಪ್ರಕರಣ ದಾಖಲು ಮಾಡಿರುವುದಿಲ್ಲ. 5 ನೇ ಪ್ರತಿವಾದಿಯನ್ನು ನನ್ನ ತಂದೆ ಸುಮಾರು 40 ವರ್ಷಗಳ ಹಿಂದೆ ಮದುವೆ ಮಾಡಿಕೊಂಡಿರುತ್ತಾನೆ. ಸಾಕ್ಷಿ 5 ನೇ ಪ್ರತಿವಾದಿ ನನಗಿಂತ ಸುಮಾರು 5 ವರ್ಷ ಮಾತ್ರ ಹಿರಿಯವಳು ಎಂದು ಸ್ವತಃ ಹೇಳುತ್ತಾರೆ. ನಮ್ಮ ಮತ್ತು 2 ರಿಂದ 5 ನೇ ಪ್ರತಿವಾದಿಯರ ಸಂಬಂಧ ಚೆನ್ನಾಗಿದೆ ಎಂದರೆ ಸರಿಯಲ್ಲ. ನನ್ನ ಮದುವೆ 2008 ರಲ್ಲಿ ಆಗಿದೆ. 2 ರಿಂದ 4 ನೇ ಪ್ರತಿವಾದಿಯರ ಮದುವೆಗಳು ನನ್ನ ಮದುವೆಯ ನಂತರ ಆಗಿರುತ್ತವೆ. 2 ರಿಂದ 4 ನೇ ಪ್ರತಿವಾದಿಯರ ಮದುವೆಗಳನ್ನು ನನ್ನ ತಂದೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ತಂದೆ ತೀರಿಕೊಂಡ ನಂತರ ಎಲ್ಲಾ ಮದುವೆಗಳು ಆಗಿವೆ ಎಂದು ಹೇಳುತ್ತಾರೆ.

ನಮ್ಮ ಮತ್ತು 2 ರಿಂದ 5 ನೇ ಪ್ರತಿವಾದಿಯರ ನಡುವೆ ಯಾವುದೇ ಪಾಲುವಿಭಾಗ ಪತ್ರ ಆಗಿಲ್ಲ. ಸಾಕ್ಷಿ ಸ್ವತಃ ನನ್ನ ತಂದೆ ತೀರಿಕೊಂಡ ನಂತರ, ಮನೆಯ ಕುರಿತು ಪಾಲುವಿಭಾಗ ಮಾಡಿಕೊಂಡೇವು ಎಂದು ಹೇಳುತ್ತಾರೆ. ದಿನಾಂಕಃ10-12-2015 ರಂದು ನೊಂದಾಯಿತ ಪಾಲುವಿಭಾಗ ಮನೆಯ ಆಸ್ತಿಯ ಕುರಿತು ಮಾಡಿಕೊಂಡೇವು ಎಂದರೆ ಸರಿ. ಪಾಲುವಿಭಾಗದ ಪ್ರಕಾರ ನಮಗೆ 3 ಮನೆ ಮತ್ತು ಅವರಿಗೆ 3 ಮನೆ ಹೋಗಿವೆ ಎಂದರೆ ಸರಿ. ಪಾಲುವಿಭಾಗ ಸಂದರ್ಭದಲ್ಲಿ ನೀವು ತಂಟೆ ತಕರಾರು ಮಾಡಿಲ್ಲ ಎಂದರೆ ಸಾಕ್ಷಿ ಮಾಡಿದ್ದೇವು ಆದರೆ ಪಾಲುವಿಭಾಗ ಮಾಡಿಕೊಂಡೇವು ಎಂದು ಹೇಳುತ್ತಾರೆ. ದಾವಾದಲ್ಲಿ ಕಾಣಿಸಿದ ಆಸ್ತಿ ಹೊರತುಪಡಿಸಿ ಬೇರೆ ಜಮೀನುಗಳು ಇರುವುದಿಲ್ಲ.

ಸರ್ವೆ ನಂಬರ್-102/4 ಸಾರಥಿ ಗ್ರಾಮದ್ದು ಮತ್ತು ಸರ್ವೆ ನಂಬರ್ 85/2 ಇವು ಎರಡು ಜಮೀನುಗಳು ಇದ್ದವು. ಈ ಎರಡೂ ಜಮೀನುಗಳು ಈಗ ಭೂಸ್ವಾಧೀನಗೊಂಡಿವೆ ಎಂದರೆ ಸರಿ. ರೂ.44 ಲಕ್ಷ ಇದು ಸರ್ವೆ ನಂಬರ್ 102/4 ರ ಕುರಿತು ಬಂದಿತ್ತು. ಸರ್ವೆ ನಂಬರ್ 85/2 ರ ಪರಿಹಾರ ಹಣ ರೂ.68 ಲಕ್ಷ ಇದ್ದು, ಅದು ಇನ್ನೂ ಬಿಡುಗಡೆಗೊಂಡಿಲ್ಲ. 44 ಲಕ್ಷದಲ್ಲಿ 1 ನೇ ಪ್ರತಿವಾದಿ ಮತ್ತು ನಾವು 22 ಲಕ್ಷ ಮತ್ತು 2 ರಿಂದ 5 ನೇ ಪ್ರತಿವಾದಿಯರು ಕೂಡಿ 22 ಲಕ್ಷ ಪಡೆದುಕೊಂಡೇವು ಎಂದರೆ ಸರಿಯಲ್ಲ. ರೂ.22 ಲಕ್ಷ ನನ್ನ ತಾಯಿಯ ಖಾತೆಗೆ ಜಮಾ ಆಗಿದೆ ಎಂದರೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ 2 ರಿಂದ 5 ನೇ ಪ್ರತಿವಾದಿಗಳ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.